55-0-154

## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕಂದಾಯ ಸಚಿವರ ಹೇಳಿಕೆ:**

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡಲು **ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವ ಅಧಿನಿಯಮ, 2011ರ ಕುರಿತು**

### ಹೇಳಿಕೆ

ಕೃಷಿಯೇತರ ಭೂಮಿಗಳು, ಮುಖ್ಯವಾಗಿ ಮನೆ ನಿವೇಶನಗಳ ಸಂಬಂಧದಲ್ಲಿ ಮೂಲಗೇಣಿ ಗುತ್ತಿಗೆಗಳ ಕೆಲವು ಬಗೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿವೆ. ಅನೇಕ ಕಾರಣಗಳಿಂದ ಮೂಲಗೇಣಿದಾರರು ಅಥವಾ ಒಳಮೂಲಗೇಣಿದಾರರು ಆ ಹಿಡುವಳಿ ಸ್ವತ್ತನ್ನು ಪೂರ್ಣವಾಗಿ ಅನುಭವಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡಲು **ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವ ಅಧಿನಿಯಮ, 2011** ಅನ್ನು ದಿನಾಂಕ: 25.07.2012 ರಂದು ಸರ್ಕಾರವು ರಾಜ್ಯಪತ್ರದಲ್ಲಿ ಪ್ರಕಟಿಸಿತ್ತು. ಈ ಅಧಿನಿಯಮದ ಉಪಬಂಧಗಳು ದಿನಾಂಕ: 20.12.2012 ರಿಂದ ಜಾರಿಗೆ ಬಂದಿರುತ್ತವೆ.

ಮೇಲ್ಕಂಡ ಅಧಿನಿಯಮ ಜಾರಿಗೆ ಬಂದ ನಂತರ, ಅದನ್ನು ಜಾರಿಗೊಳಿಸಲು ನಿಯಮಗಳನ್ನು ಸಹ ರಚಿಸಲು ಸರ್ಕಾರ ತಯಾರು ಮಾಡಿಕೊಂಡಿತ್ತು. ಈ ಹಂತದಲ್ಲಿ ಮೂಲಗೇಣಿದಾರರ ಸಂಘ ಮತ್ತು ಮೂಲಿದಾರರ ಸಂಘಗಳು ಸದರಿ ಮಾಲೀಕತ್ವ ಪ್ರದಾನ ಮಾಡುವ ಅಧಿನಿಯಮಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಿದ್ದರು. ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲಿಸಿ, ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ದಿನಾಂಕ: 07.11.2016 ರಂದು **ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವ ನಿಯಮಗಳು, 2016** ಅನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಮತ್ತು ಉಡುಪಿ ರವರಿಗೆ ಸೂಚನೆಗಳನ್ನು ಸಹ ನೀಡಿ ಸದರಿ ನಿಯಮಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಬೇಕೆಂದು ತಿಳಿಸಲಾಗಿತ್ತು.

ಈ ಹಂತದಲ್ಲಿ ಇದಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ: 11158-66/2013 ಮತ್ತು 62434/2016 ದಾಖಲಾಗಿತ್ತು. ಸದರಿ ಪ್ರಕರಣವು ದಿನಾಂಕ: 22.05.2023 ರಲ್ಲಿ ಇತ್ಯರ್ಥವಾಗಿರುತ್ತದೆ. ಆದರೆ ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ W.A.No.726/2023 ದಾಖಲಾಗಿರುತ್ತದೆ. ಈ ಸಂಬಂಧ ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 20 ಎಲ್‌ಆರ್‌ಎ 2024 ದಿನಾಂಕ: 24.01.2024 ರಲ್ಲಿ ಸರ್ಕಾರಿ ವಕೀಲರನ್ನು ನೇಮಿಸಿ ಆದೇಶಿಸಿದೆ. ಅದರಂತೆ ಪ್ರಸ್ತುತ ಪ್ರಕರಣ ವಿಚಾರಣಾ ಹಂತದಲ್ಲಿರುತ್ತದೆ.

[ಕೃಷ್ಣ ಬೈರೇಗೌಡ]
ಕಂದಾಯ ಸಚಿವರು.

ಸಂಖ್ಯೆ: ಆರ್‌ಡಿ 28 ಎಲ್‌ಆರ್‌ಎಸ್ 2024